—9—

ಬೇರೆಯವರಿಗೆ ಹಿಂಸೆ ಕೊಟ್ಟು ಅವರು ಸಂಕಟಪಡುವುದನ್ನು ಕಂಡು ಸಂತೋಷಪಡುವವರನ್ನು ಸ್ಯಾಡಿಸ್ಟ್‌ಗಳೆಂದು ಕರೆಯುತ್ತಾರೆ. ತನ್ನನ್ನು ತಾನು ಹಿಂಬಾಲಿಸಿಕೊಂಡು ಸಂತೋಷಪಡುವವರನ್ನು ಮೆಸೋಕಿಸ್ಟ್‌ಗಳೆನ್ನುತ್ತಾರೆ. ಈ ಎರಡರ ಮಿಶ್ರಣದ ಮೂಲಕ ಆನಂದ ಪಡುವವರಿಗೆ ಸೈಕಾಲಜಿಯಲ್ಲಿ ಯಾವ ಪದವೂ ಇಲ್ಲ.

ಪ್ರೇಮ್‌ಜಿತ್ ಆ ಜಾತಿಗೆ ಸೇರಿದವನು.

ಅವನು ಪ್ರತಿ ಸಂಜೆ ದೇವಸ್ಥಾನಕ್ಕೆ ಹೋಗುತ್ತಾನೆ. ದೇವರಿಗಾಗಿಯಲ್ಲ, ಸ್ತ್ರೀಯರಿಗಾಗಿ! ಶರ್ಟ್, ಜೀನ್ಸ್ ಧರಿಸಿರುವ ಹುಡುಗಿಯರೆಂದರೆ ಅವನಿಗೆ ಇಷ್ಟವಿಲ್ಲ. ಮದುವೆಯಾದ ಹೆಂಗಸರೆಂದರೆ ಇಷ್ಟ. ಸಂಪ್ರದಾಯಬದ್ಧವಾಗಿ ಸೀರೆ ಉಟ್ಟು, ದೇವರ ಮುಂದೆ ಬಾಗಿ ತೀರ್ಥ ತೆಗೆದುಕೊಳ್ಳುತ್ತಿರುವ ಹೆಂಗಸರನ್ನು ಹಿಂದುಗಡೆಯಿಂದ ನೋಡುವುದು ಅವನಿಗೆ ಇನ್ನೂ ಇಷ್ಟ.

ಕೋಣೆಗೆ ಕರೆತರುವ ವೇಶ್ಯೆಯರಿಗೂ ಸೀರೆ ಕಟ್ಟಿಕೊಂಡು ಬರಲು ತಿಳಿಸುತ್ತಾನೆ. ಉರಿಯುತ್ತಿರುವ ಸಿಗರೇಟಿನಿಂದ ತನ್ನನ್ನು ಸುಡಲು ಅವರಿಗೆ ಹೇಳುತ್ತಾನೆ. ಸುಡುತ್ತಿರುವಾಗ ಹುಚ್ಚನಂತೆ ಕೇಕೆ ಹಾಕುತ್ತಾನೆ. ಯಾವುದೋ ಸಿನಿಮಾದಲ್ಲಿ ತೋರಿಸಿರುವ ಹಾಗೆ ಅವರ ಕೈಕಾಲುಗಳನ್ನು ಕಟ್ಟಿ ಅನುಭವಿಸುತ್ತಾ, ಮಧ್ಯಮಧ್ಯ ಅವರನ್ನು ಸಿಗರೇಟ್‌ನಿಂದ ಸುಟ್ಟು ಪೈಶಾಚಿಕ ಆನಂದ ಪಡೆಯುತ್ತಾನೆ. ತಿರುಗಿಬಿದ್ದ ಒಬ್ಬ ಹದಿನೈದರ ಹುಡುಗಿಯನ್ನು ಸಾಯಿಸಿ ಬಿಟ್ಟಿದ್ದನು.

ತಾಯಿ ಹಳ್ಳಿಯಲ್ಲಿ ಕೂಲಿ ಮಾಡುತ್ತಾಳೆ. ದುಡ್ಡು ಬೇಕಾದಾಗಲೆಲ್ಲ ಅವಳ ಬಳಿಗೆ ಹೋಗಿ ಪೀಡಿಸುತ್ತಾನೆ. ಇಲ್ಲ ಎಂದರೆ ಹಿಂಸೆ ನೀಡಿ ಕಿತ್ತುಕೊಳ್ಳುತ್ತಾನೆ. ಮೊನ್ನೆ ಅವಳನ್ನು ಹೊಡೆದು ಓಲೆ, ಸರ ಕಿತ್ತು ತಂದು, ಅವುಗಳನ್ನು ಮಾರಿ ಒಂದು ಮೋಟಾರ್ ಸೈಕಲ್ ಕೊಂಡನು.

ಪ್ರೇಮ್‌ಜಿತ್‌ನ ಬಗ್ಗೆ ಆಳವಾಗಿ ತಿಳಿದುಕೊಳ್ಳುವುದಕ್ಕೆ ಈ ಕೆಳಗಿನ ಉದಾಹರಣೆ ಸಾಕು.

ಅವನ ಡ್ರಗ್ಸ್ ಅಭ್ಯಾಸದ ಬಗ್ಗೆ ಅರಿತ ಪ್ರಿನ್ಸಿಪಾಲ್ ಅವನನ್ನು ಕೌನ್ಸಿಲರ್ ಬಳಿಗೆ ಕಳಿಸಿದರು. ಮೊದಲು ಹೋಗುವುದಿಲ್ಲ ಎಂದನು. ಹೋಗದಿದ್ದರೆ ಟಿ.ಸಿ. ಕೊಟ್ಟು ಕಳಿಸುತ್ತೇವೆ ಎಂದಿದ್ದಕ್ಕೆ ಇಷ್ಟವಿಲ್ಲದಿದ್ದರೂ ಹೋದನು. ಅವರಿಬ್ಬರ ನಡುವಿನ ಸಂಭಾಷಣೆ ಹೀಗೆ ನಡೆಯಿತು.

'ನಿಮ್ಮ ಪ್ರಿನ್ಸಿಪಾಲ್ ನಿಮ್ಮ ಬಗ್ಗೆ ಸಾಕಷ್ಟು ವಿವರಗಳು ಹೇಳಿ ನಿಮಗೆ ಕೌನ್ಸಿಲಿಂಗ್ ಮಾಡಲಿಕ್ಕೆ ಹೇಳಿದರು... ಈ ವಯಸ್ಸಿನಲ್ಲಿ ಹುಡುಗಿಯರು, ಡ್ರಗ್ಸ್, ಕುಡಿತ ಇವೆಲ್ಲ ಬೇಕಾ? ಚೆನ್ನಾಗಿ ಓದಬಹುದಲ್ಲ'

'ಬುದ್ಧಿ ಇಲ್ಲದವನು ಚೆನ್ನಾಗಿ ಓದುತ್ತಾನೆ. ಬುದ್ಧಿ ಇರೋವ್ನು ಬುದ್ಧಿ ಇಲ್ಲದ ಹುಡುಗಿಯರಿಗೆ ಲೈನ್ ಹೊಡೆದು ಶ್ರೀಮಂತರ ಮನೆ ಅಳಿಯನಾಗ್ತಾನೆ'.

'ಇಲ್ಲಿಗೆ ಬರುವುದು ನಿಮಗಿಷ್ಟವಿಲ್ಲ ಅನಿಸುತ್ತೆ. ಒರಟಾಗಿ ಉತ್ತರ ಹೇಳುತ್ತಿದ್ದೀರಿ. ಏನು ನಿಮ್ಮ ಮುಖ್ಯ ಸಮಸ್ಯೆ?'

'ಎದುರಿಗೆ ಇರುವವರನ್ನು ಸಾಯಿಸುವಾಗ ಯಾರಿಗಾದರೂ ಸಿಟ್ಟು, ದ್ವೇಷ, ಫ್ರಸ್ಟ್ರೇಷನ್ ಇರುತ್ತದೆ. ಆದರೆ ನನಗೆ ನಗು ಬರುತ್ತದೆ. ಹುಡುಗಿಯರಿಗೆ 'ಐ ಲವ್ ಯೂ', 'ಐ ಕಿಲ್ ಯೂ' ಎರಡನ್ನೂ ಒಂದೇ ರೀತಿ ಹೇಳುತ್ತೇನೆ. ಅದೇ ನನ್ನ ಪ್ರಾಬ್ಲಂ. ಸಿನಿಮಾ ಇಂಡಸ್ಟ್ರಿಯಲ್ಲಿ ಎಷ್ಟೊ ಮಂದಿಗೆ ಇದೇ ಪ್ರಾಬ್ಲಮ್ಮು.... ಎಕ್ಸ್‌ಪ್ರೆಶನ್‌ನೆಸ್'.

ಸೈಕಾಲಜಿಸ್ಟ್ ಬೇಸರದಿಂದ 'ನಿಮಗೆ ಸಹಾಯ ಮಾಡುವುದಕ್ಕೆ ನಾವಿಲ್ಲಿ ಇದ್ದೇವೆ. ಅದನ್ನು ಅರ್ಥ ಮಾಡಿಕೊಳ್ಳಿ' ಎಂದನು.

'ನೀವೇ ನನ್ನನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಹುಡುಗಿ ಹೋಟೆಲ್‌ಗೆ ಕರೆದರೆ ಯಾವ ಹುಡುಗನಿಗಾದರೂ ಹೋಗಬೇಕೆನಿಸುತ್ತದೆ. ಆದರೆ ನನಗೆ ಆ ಹುಡುಗಿಯನ್ನು ಸಾಯಿಸಬೇಕು ಅನಿಸುತ್ತದೆ.'

'ಏಕೆ?'

'ಯಾವ ಹುಡುಗಿಯೂ ಬಿಲ್ ಕೊಡುವುದಿಲ್ಲ. ಬಿಲ್ ಬರುವ ಸಮಯಕ್ಕೆ ರೆಸ್ಟ್‌ರೂಂಗೆ ಫ್ರೆಶ್‌ಅಪ್ ಆಗಲಿಕ್ಕೆ ಹೋಗುತ್ತಾರೆ, ಅದಕ್ಕೆ'

'ನಿಮಗೇನಾದರೂ ಸೆಕ್ಸುವಲ್ ಪ್ರಾಬ್ಲಂ ಇದೆಯಾ?'

'ನನಗಿಲ್ಲ, ನನ್ನ ಗರ್ಲ್ ಫ್ರೆಂಡ್ಸ್‌ಗೆ ಇವೆ'

'ನಿಮ್ಮ ವಿಪರೀತದ ಯೋಚನೆ ಬಗ್ಗೆ ಒಂದು ಉದಾಹರಣೆ ಹೇಳಿ'

'ಪ್ರತಿ ಗಂಡಸಿಗೆ ಮೂರು ಹೆಂಡತಿ ಇರಬೇಕು'

'ಏಕೆ?' ಸೈಕಾಲಜಿಸ್ಟ್ ಕೇಳಿದನು.

'ಒಬ್ಬಳು ಅಡುಗೆ ಮಾಡುವುದಕ್ಕೆ, ಇನ್ನೊಬ್ಬಳು ರೋಮಾನ್ಸ್‌ಗೆ, ಮತ್ತೊಬ್ಬಳು ಮಕ್ಕಳನ್ನು ಹೆರುವುದಕ್ಕೆ'

ಆಗ ಅನುಮಾನದಿಂದ 'ಮತ್ತೆ ಹೆಣ್ಣಿಗೆ?' ಎಂದು ಪ್ರಶ್ನಿಸಿದನು.

'ಐದು ಮಂದಿ ಇರಬೇಕು'

'ಏತಕ್ಕೆ?'

'ಹೇಳಲ್ಲ, ಭಯಪಡುತ್ತೀರಿ'

ಮತ್ತೊಂದು ಪ್ರಶ್ನೆ ಕೇಳಿದರೆ ಮತ್ತಷ್ಟು 'ಆಳವಾದ' ಉತ್ತರ ಬರುತ್ತದೆಂದುಕೊಂಡು ಟಾಪಿಕ್ ಬದಲಾಯಿಸಿದನು ಸೈಕಾಲಜಿಸ್ಟ್.

'ಈ ಪ್ರಪಂಚದಲ್ಲಿ ನಿಮಗಿಷ್ಟವಾದ ಪ್ರದೇಶಗಳು?'

ಪ್ರೇಮ್ ದೀರ್ಘವಾಗಿ ಯೋಚಿಸಿ 'ಗುಡಿಗಳು' ಎಂದನು.

ಅವನು ಆಶ್ಚರ್ಯಪಟ್ಟು, ನಂತರ ಸಹಾನುಭೂತಿಯಿಂದ ಪ್ರೇಮ್‌ನನ್ನು ನೋಡುತ್ತ 'ನಿಮಗೆ ಸಣ್ಣ ವಯಸ್ಸಿನಲ್ಲಿ ಮಾನಸಿಕವಾಗಿ ಪೆಟ್ಟು ಬಿದ್ದ ಹಾಗಿದೆ. ಹಾಗಾಗಿ ನೀವೊಂದು ಸ್ಪ್ಲಿಟ್ **(Split)** ಪರ್ಸನಾಲಿಟಿಯಾಗಿದ್ದೀರಿ. ನಿಮಗೆ ಲಾಂಗ್‌ಟರ್ಮ್ ಟ್ರೀಟ್‌ಮೆಂಟ್ ಬೇಕು. ಒಳ್ಳೆಯ ಸ್ನೇಹಪೂರಿತ ವಾತಾವರಣದಲ್ಲಿ ನಮ್ಮ ಟ್ರೀಟ್‌ಮೆಂಟ್ ಪ್ರಾರಂಭಿಸೋಣ. ನಮ್ಮ ಮನೆಗೆ 'ಟೀ'ಗೆ ಬರುತ್ತೀರಾ?' ಎಂದು ಆಹ್ವಾನಿಸಿದನು.

ಪ್ರೇಮ್ ಒಂದು ಕ್ಷಣ ಯೋಚಿಸಿ 'ನಿಮ್ಮ ಹೆಂಡತಿ ಸೀರೆ ಉಡುತ್ತಾರಾ?' ಎಂದು ಕೇಳಿದನು.

ಭೂಮಿ ವಿರುದ್ಧ ದಿಕ್ಕಿನಲ್ಲಿ ಸುತ್ತುತ್ತಿದೆ ಅನಿಸಿತು ಸೈಕಾಲಜಿಸ್ಟ್‌ನಿಗೆ 'ಗುಡಿಗೆ ಹೋಗುತ್ತೀರಾ?' ಮತ್ತೆ ಪ್ರಶ್ನಿಸಿದನು.

ಆಗ ಸೈಕಾಲಜಿಸ್ಟ್‌ಗೆ ಪರಿಸ್ಥಿತಿ ಅರ್ಥವಾಯಿತು. ಸಹಾನುಭೂತಿಯಿಂದ 'ನಿಮ್ಮ ಬಾಲ್ಯದ ಅನುಭವಗಳ ಬಗ್ಗೆ ವಿವರಗಳನ್ನು ಹೇಳಿ. ಸಂಕೋಚವಾಗಲೀ ನಾಚಿಕೆಯಾಗಲೀ ಬೇಡ. ನಾನೇ ನಿಮ್ಮ ತಂದೆ ಅಂತ ತಿಳಿ' ಎಂದನು.

ಕಣ್ರೆಪ್ಪೆ ಬಡಿಯುವಷ್ಟರಲ್ಲಿ ಪ್ರೇಮ್ ಟೇಬಲ್ ಮೇಲಿದ ಬಾಲ್ ಪೆನ್ ಎತ್ತಿಕೊಂಡು, ಸೈಕಾಲಜಿಸ್ಟ್‌ನ ಕೈಯನ್ನು ಹಿಂದಕ್ಕೆ ತಿರುಚಿ, ವೇಗವಾಗಿ ಪೆನ್‌ನಿಂದ ಚುಚ್ಚುತ್ತ 'ಇನ್ಯಾರಿಗೂ ಈ ಮಾತು ಹೇಳಬೇಡ. ನನ್ನ ತಂದೆ ಮಾತ್ರ ನನಗೆ ತಂದೆ. ನನ್ನ ತಾಯಿಯ ಮೇಲೆ ನನಗೆ ಬಹಳ ನಂಬಿಕೆ ಇದೆ' ಎಂದನು.

ಪೆನ್ನು ಆಳಕ್ಕಿಳಿಯಿತು. ಸೈಕಾಲಜಿಸ್ಟನ ಕೂಗು ಆ ಕೋಣೆಯಲ್ಲಿ ಪ್ರತಿಧ್ವನಿಸಿತು.

—10—

ಎಂದೋ ನಡೆದ ಸಣ್ಣ ಘಟನೆ ಬದುಕಿನಲ್ಲಿ ಒಂದು ದೊಡ್ಡ ಬದಲಾವಣೆಗೆ ಮೂಲ ಕಾರಣ ಆಗುವುದಕ್ಕೆ 'ಬಟರ್ ಫ್ಲೈ ಎಫೆಕ್ಟ್' ಎನ್ನುತ್ತಾರೆ. ನಮ್ಮೆಲ್ಲರ ಬದುಕಿನಲ್ಲೂ ಇಂತಹ ಘಟನೆಗಳ ಪ್ರಭಾವ ಎಲ್ಲಿಯೋ ಒಂದು ಕಡೆ ಇದ್ದೇ ಇರುತ್ತದೆ. ಇಂಟರ್‌ವ್ಯೂಗೆ ಹೊರಟಿದ್ದಾಗ ಬಸ್ ಮಿಸ್ ಆಗಿ, ನಂತರ ನೌಕರಿ ಸಿಗದೆ, ಹೊಟ್ಟೆ ಹೊರೆಯುವುದಕ್ಕೆ ಸಣ್ಣದಾಗಿ ವ್ಯಾಪಾರ ಪ್ರಾರಂಭಿಸಿ ಕೋಟ್ಯಾಧೀಶ್ವರನಾದ ವ್ಯಕ್ತಿಗೆ ಆದಿನ ಬಸ್ ಸಿಕ್ಕಿದ್ದರೆ ಇಡೀ ಜೀವನ ನೌಕರನಾಗಿ ಉಳಿದು ಬಿಡುತ್ತಿದ್ದ ಅಲ್ಲವೇ?

'ಬಟರ್ ಫ್ಲೈ ಎಫೆಕ್ಟ್'ಗೆ ಇದೊಂದು ಉದಾಹರಣೆ.

ಮಹಾಭಾರತದಲ್ಲಿ ದ್ರೌಪದಿಯ ನಗು ಇನ್ನೊಂದು ಉದಾಹರಣೆ. ಸಭೆಯಲ್ಲಿ ಅವಳು ನಗದಿದ್ದರೆ, ಕುರುಕ್ಷೇತ್ರ ಯುದ್ಧವೇ ನಡೆಯುತ್ತಿರಲಿಲ್ಲ ಎಂದು ಕೆಲವರು ಹೇಳುತ್ತಾರೆ.

ಲಾರೀ–ಲಾಪೆರ್ರಿ ಬರೆದಿರುವ 'ಫ್ರೀಡಂ ಅಟ್ ಮಿಡ್‌ನೈಟ್' ನಲ್ಲಿ ಭಾರದ ದೇಶ ಚರಿತ್ರೆಯನ್ನೇ ಬದಲಾಯಿಸಿದ 'ಬಟರ್ ಫ್ಲೈಎಫೆಕ್ಟ್' ಒಂದಿದೆ.

ಗುಜರಾತ್‌ನಲ್ಲಿ ಲೋಹಾನಾ ಜಾತಿಗೆ ಸೇರಿದ ರಜಪೂತರು ಸಸ್ಯಾಹಾರಿಗಳು. ಪ್ರೇಮ್‌ಜೀ ಭಾಯ್ ಎಂಬ ಲೋಹಾನಾ ಕುಲಸ್ಥರು ಮೀನು ವ್ಯಾಪಾರ ಮಾಡುತ್ತಿದ್ದರಿಂದ ಜಾತಿಯಿಂದ ಬಹಿಷ್ಕಾರ ಹಾಕಿದರು. ವ್ಯಾಪಾರ ನಿಲ್ಲಿಸುತ್ತೇನೆಂದು ಅವನೆಷ್ಟೇ ಬೇಡಿಕೊಂಡರೂ ಜಾತಿ ಮುಖಂಡರು ಒಪ್ಪಲಿಲ್ಲ. ಆಗ ಸಿಟ್ಟಾದ ಅವನ ಮಗ ಇಸ್ಲಾಂ ಧರ್ಮ ಸ್ವೀಕಾರ ಮಾಡಿದನು. ಮುಂದೆ ತನ್ನ ಮಗನಿಗೆ 'ಜಿನ್ನಾ' ಎಂದು ಹೆಸರಿಟ್ಟನು.